ವಿಷಯ:- ಶಿರಾ ತಾಲ್ಲೂಕಿನಲ್ಲಿ ಬಿರುಗಾಳಿಯಿಂದ ಬೆಳೆಗಳಿಗೆ ತೀವ್ರ ಹಾನಿ.

1444 (880) ಶ್ರೀ ಟಿ. ಬಿ. ಜಯಚಂದ್ರ, ಕಳ್ಳಂಬೆಳ್ಳ:- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?.

ಅ) ಶಿರಾ ತಾಲ್ಲೂಕಿನ ಗೌಡಗೆರೆ ಹೋಬಳಿಗೆ ಬರುವ ತಾವರೇಕೆರೆ ಲಕ್ಷ್ಮೀಸಾಗರ ಹುಣಸೇಹಳ್ಳಿ, ಮತ್ತಿತರ ಗ್ರಾಮಗಳಲ್ಲಿ ಕೆಲವು ತಿಂಗಳ ಹಿಂದೆ ಭಾರಿ ಗಾಳಿಯಿಂದಾಗಿ ಅಡಿಕೆ, ತೆಂಗು, ಮಾವು ಬಾಳೆ ಮತ್ತಿತರ ಮರಗಳಿಗೆ ಮತ್ತು ಬೆಳೆಗೆ ತೀವ್ರ ಹಾನಿಯಾಗಿರುವುದು ನಿಜವಲ್ಲವೇ?

ಆ) ಹಾನಿಗೊಳಗಾದ ರೈತರ ನಷ್ಟಕ್ಕೆ ಸರ್ಕಾರದಿಂದ ಹಣ ಬಿಡುಗಡೆ ಮಾಡಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಬಿಡುಗಡೆ ಮಾಡದಿರಲು ಕಾರಣವೇನು, ಹಣ ಬಿಡುಗಡೆಯಾಗಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):-

ಅ) ಹೌದು. ಶಿರಾ ತಾಲ್ಲೂಕು ಗೌಡಗೆರೆ ಹೋಬಳಿ, ತಾವರೇಕೆರೆ, ಲಕ್ಷ್ಮೀಸಾಗರ, ಹುಣಸೇಹಳ್ಳಿಗಳಲ್ಲಿ ದಿನಾಂಕ 11-4-96 ರಂದು ಭಾರಿ ಗಾಳಿ ಮಳೆಯಿಂದಾಗಿ ತೆಂಗಿನ ಮರ, ಅಡಿಕೆ ಮರ ಮಾವಿನ ಮರ ಇನ್ನಿತರ ಬೆಳೆಗಳಿಗೆ ನಷ್ಟವಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹೌದು, ಹಣ ಬಿಡುಗಡೆ ಮಾಡಲಾಗಿದೆ. ಈ ಬಗ್ಗೆ ಸಹಾಯಕ ತೋಟಗಾರಿಕೆ ನಿರ್ದೇಶಕರು, ಶಿರಾ ತಹಶೀಲ್ದಾರ್, ಶಿರಾ ತಾಲ್ಲೂಕು ರವರು ಜಂಟಿ ಸಮೀಕ್ಷೆ ಮಾಡಿ ವರದಿಯನ್ನು ತಹಶೀಲ್ದಾರ್ ರವರು ಜಿಲ್ಲಾಧಿಕಾರಿಗಳು, ತುಮಕೂರು ರವರಿಗೆ ಸಲ್ಲಿಸಿದ ಪ್ರಯುಕ್ತ ಶಿರಾ ತಾಲ್ಲೂಕು ಲಕ್ಷ್ಮೀಸಾಗರ ಗ್ರಾಮದಲ್ಲಿ 80 ಸಂಖ್ಯೆ ಸಂತ್ರಸ್ತರಿಗೆ ಅಡಿಕೆ, ಎಲೆ ಬಳ್ಳಿ, ತೆಂಗು ಮಾವಿನ ಮರ, ಹಲಸು ಇನ್ನಿತರ ಕೃಷಿ ಫಸಲಿಗೆ ಹಾನಿಯುಂಟಾಗಿದ್ದು ಪ್ರಕೃತಿ ವಿಕೋಪದಿಂದಾದ ಈ ನಷ್ಟಕ್ಕೆ ಜಿಲ್ಲಾಧಿಕಾರಿಗಳು ತುಮಕೂರು ಜಿಲ್ಲೆರವರು ದಿನಾಂಕ 21-6-96 ರಂದು "ಪ್ರಕೃತಿ ವಿಕೋಪ ಪರಿಹಾರ ನಿಧಿ" ಯಿಂದ ರೂ. 71,600.00 ಗಳನ್ನು ಮಂಜೂರು ಮಾಡಿರುತ್ತಾರೆ.

ಇ) ಅನ್ವಯಿಸುವುದಿಲ್ಲ.

ವಿಷಯ:- ಕಳ್ಳಂಬೆಳ್ಳದಲ್ಲಿ ರಸ್ತೆಸಾರಿಗೆ ಬಸ್ ತಂಗು ದಾಣ ನಿರ್ಮಾಣ.

1445 (879) ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?.

ಅ) ಕಳ್ಳಂಬೆಳ್ಳ ಸಾರಿಗೆ ಸಂಸ್ಥೆಯ ತಂಗುದಾಣಕ್ಕಾಗಿ ಸರ್ಕಾರಿ ಜಮೀನು ಮೀಸಲಿರಿಸಿದ್ದು ಸಂಸ್ಥೆಯ ವಶಕ್ಕೆ ಕೊಟ್ಟಿರುವುದು ನಿಜವೇ?

ಆ) ಬಸ್ ತಂಗುದಾಣಕ್ಕೆ (ನಿಲ್ದಾಣ) ಅನೇಕ ಪ್ರಸ್ತಾವನೆ ಮನವಿ ಬಂದಿದ್ದಾಗ್ಯೂ ಸಹ ಇಲ್ಲಿಯವರೆವಿಗೂ ಯಾವುದೇ ವಿಧವಾದ ಕ್ರಮವನ್ನು ತೆಗೆದುಕೊಳ್ಳದಿರಲು ಕಾರಣವೇನು?

ಇ) 1996-97ನೇ ಸಾಲಿನಲ್ಲಿಯಾದರೂ ನಿಲ್ದಾಣವನ್ನು ನಿರ್ಮಾಣ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಇಲ್ಲ

ಆ) ನಿವೇಶನವು ಲಭ್ಯವಾಗಿಲ್ಲದುದರಿಂದ ಬಸ್ ನಿಲ್ದಾಣ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿಲ್ಲ. ಸರ್ವೆ ನಂ. 396:ಎ ನಲ್ಲಿ ನಿವೇಶನವನ್ನು ಒದಗಿಸಲು ತುಮಕೂರಿನ ಜಿಲ್ಲಾಧಿಕಾರಿಯವರನ್ನು ಕೋರ ಲಾಗಿದೆ.

ಇ) ಉದ್ಭವಿಸುವುದಿಲ್ಲ.

ವಿಷಯ:- ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘದಿಂದ ಶಾಸಕರುಗಳಿಗೆ ನಿವೇಶನ.

1446 (2355) **ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):-** ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಎಷ್ಟು ಜನ ಮಾಜಿ ಹಾಲಿ ಶಾಸಕರು ಮತ್ತು ಸಂಸತ್ ಸದಸ್ಯರು ಸದಸ್ಯರಾಗಿರುತ್ತಾರೆ?

ಆ) ಇವರಲ್ಲಿ ಎಷ್ಟು ಮಂದಿಗೆ ಬೆಂಗಳೂರಿನಲ್ಲಿ ನಿವೇಶನಗಳನ್ನು ಒದಗಿಸಲಾಗಿದೆ, ಇನ್ನು ಒದಗಿ-ಸಬೇಕಾಗಿರುವ ಸಂಖ್ಯೆ ಎಷ್ಟು?

ಇ) ಕೆಲವು ವರ್ಷಗಳಿಂದ ಈ ನಿವೇಶನ ಹಂಚಿಕೆ ಕಾರ್ಯಕ್ರಮ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಮಂಜೂರಾಗದೇ ಉಳಿದಿರುವ ಸದಸ್ಯರುಗಳಿಗೆ ಯಾವಾಗ ನಿವೇಶನ ಒದಗಿ-ಸಲಾಗುವುದು?

ಶ್ರೀ ಎಸ್.ಎಸ್ ಪಾಟೀಲ್ (ಸಹಕಾರ ಸಚಿವರು):-

ಅ) ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ 599 ಜನ ಮಾಜಿ ಶಾಸಕರು, 243 ಜನ ಹಾಲಿ ಶಾಸಕರು ಮತ್ತು 49 ಜನ ಸಂಸತ್ ಸದಸ್ಯರು ಸದಸ್ಯರಾಗಿರುತ್ತಾರೆ.

ಆ) ಬೆಂಗಳೂರಿನಲ್ಲಿ 446 ಸದಸ್ಯರಿಗೆ ನಿವೇಶನವನ್ನು ಒದಗಿಸಲಾಗಿದೆ. ಇನ್ನುಳಿದ 445 ಸದಸ್ಯ-ರಿಗೆ ನಿವೇಶನಗಳನ್ನು ಒದಗಿಸಬೇಕಾಗಿರುತ್ತದೆ.

ಇ) ದಿನಾಂಕ: 15-05-1990ರ ನಂತರ ನಿವೇಶನ ಹಂಚಿಕೆಯಾಗಿರುವುದಿಲ್ಲ. ಆದರೆ ಸಂಘದ ಆಡಳಿತ ಮಂಡಳಿಯ ಪದಾಧಿಕಾರಿಗಳು ದಿನಾಂಕ: 15-1-93, 30-03-1993, 22-02-1995 ಮತ್ತು 31-01-1996 ರ ದಿನಾಂಕಗಳಂದು ಆಂದಿನ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ಸಂಘಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿವೇಶನಗಳನ್ನು ಮಂಜೂರು ಮಾಡಿಕೊಡ-ಬೇಕೆಂದು ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ.